**ದಿನಾಂಕ 29.06.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಟಿ.ಸಿ.ಜಿ. ಪ್ರತಿವಾದಿಯ ಪರ ವಕೀಲರಿಂದಃ-**

ನನ್ನ ಗಂಡ ದಿನೇಶ್ ರವರು ಪೆಪ್ಸಿ ವಿತರಕರಾಗಿದ್ದರು. ಆ ಬಗ್ಗೆ ದಾಖಲು ಹಾಜರು ಪಡಿಸಿಲ್ಲ. ಆ ವಿಷಯವನ್ನು ನನ್ನ ವಾದ ಪತ್ರದಲ್ಲಿ ಹೇಳಿಲ್ಲ. ಅವರಿಗೆ ಆ ಕೆಲಸದಿಂದ ಆದಾಯವಿತ್ತು ಎಂದು ನನ್ನ ವಾದ ಪತ್ರದಲ್ಲಿ ಹೇಳಿಲ್ಲ. ನನ್ನ ಗಂಡನಿಗೆ ಜೀವಿತ ಕಾಲದಲ್ಲಿ ಆದಾಯ ಇತ್ತು ಎಂದು ತೋರಿಸಲು ಮತ್ತು ಪ್ರತಿವಾದಿಗೆ ರೂ.5,00,000/- ಹಣವನ್ನು ಕೊಡುವ ಆರ್ಥಿಕ ಸಾಮರ್ಥ್ಯ ನನ್ನ ಗಂಡನಿಗೆ ಇತ್ತು ಎಂದು ತೋರಿಸಲು ನಾನು ಯಾವುದೇ ದಾಖಲೆ ಹಾಜರು ಪಡಿಸಿಲ್ಲ ಎಂದರೆ ಸರಿ, ನಾನು ಮತ್ತು ನನ್ನ ಗಂಡ ಇಬ್ಬರೂ ಪಾಲುದಾರರಾಗಿದ್ದೆವು. ಆ ಬಗ್ಗೆ ದಾಖಲೆಗಳು ನನ್ನ ಬಳಿ ಇದ್ದು, ಅವುಗಳನ್ನು ಹಾಜರು ಪಡಿಸಲು ನನಗೆ ತೊಂದರೆ ಇಲ್ಲ.

2019 ರಲ್ಲಿ ನನ್ನ ಗಂಡ ಆಕ್ಸಿಸ್ ಬ್ಯಾಂಕ್ ನಲ್ಲಿ ಖಾತೆಯನ್ನು ಹೊಂದಿದ್ದರು. ನನ್ನ ಗಂಡ ಮತ್ತು ಪ್ರತಿವದಿಯ ನಡುವೆ ಆಗಿದ್ದ ಹಣಕಾಸು ವ್ಯವಹಾರ ಸಂಬಂಧ ನನಗೆ ಖುದ್ದು ಮಾಹಿತಿ ಇಲ್ಲ ಎಂದರೆ ನಾನು ಕೂಡ ಹಾಜರಿದ್ದೆ. ನಾನು ಹಾಜರಿದ್ದ ಬಗ್ಗೆ ದಾವಾ ದಾಖಲೆಯಾದ ಕ್ರಯದ ಕರಾರಿಗೆ ಪಕ್ಷಗಾರಳಾಗಿ ಅಥವಾ ಸಾಕ್ಷಿದಾರಳಾಗಿ ಸಹಿ ಮಾಡಿಲ್ಲ.

ಪ್ರತಿವಾದಿಯು ನನ್ನ ಗಂಡನ ಬಳಿ ಯಾವ ದಿನಾಂಕದಂದು ಸಾಲ ಕೇಳಿರುತ್ತಾರೆ ಎಂದರೆ ಯಾವ ದಿನಾಂಕದಂದು ಸಾಲ ಕೇಳಿಲ್ಲ. ಪ್ರತಿವಾದಿಯು ನನ್ನ ಗಂಡನಿಗೆ

ಯಾರಿಂದ ಪರಿಚಯ ಆಗಿದ್ದರು ಎಂದು ನನಗೆ ಗೊತ್ತಿಲ್ಲ, ವ್ಯವಹಾರದ ಮೂಲಕ ಪರಿಚಯ ಆಗಿರಬಹುದು.

ನಾನು ಮತ್ತು ನನ್ನ ಗಂಡ ಪಾಲುದಾರಿಕೆ ವ್ಯವಹಾರವನ್ನು ಹೊರತು ಪಡಿಸಿ ಲೇವಾದೇವಿ ವ್ಯವಹಾರ ಮಾಡುತ್ತಿದ್ದೆವು ಎಂದರೆ ಸರಿಯಲ್ಲ. ಪೆಪ್ಸಿ ಮಾರಾಟ ಮಾಡಿ ಬಂದ ಹಣದಿಂದ ರೂ.5,00,000/- ವನ್ನು ನನ್ನ ಗಂಡ ಪ್ರತಿವಾದಿಗೆ ನೀಡಿದ್ದರು. ಆ ಮಾರಾಟ ಮಾಡಿ ಬಂದ ಹಣವನ್ನು ಸದರಿ ಆಕ್ಸಿಸ್ ಬ್ಯಾಂಕ್ ನಲ್ಲಿ ಇಟ್ಟು ಆಸ್ತಿಯನ್ನು ಖರೀದಿಸುವ ವೇಳೆಗೆ ಹಣವನ್ನು ಪಡೆಯುತ್ತಿದ್ದರು.

2016 ರಿಂದ 2019 ರ ಅವಧಿಯ ನನ್ನ ಗಂಡನ ಹಣಕಾಸಿನ ವ್ಯವಹಾರದ ಬ್ಯಾಂಕ್ ವಿವರವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ನನಗೆ ತೊಂದರೆ ಇಲ್ಲ.

ನನ್ನ ಗಂಡನ ಮತ್ತು ಪ್ರತಿವಾದಿಯ ನಡುವೆ ಕ್ರಯದ ಕರಾರಿನ ಮಾತುಕತೆಯು ದಿನಾಂಕ 06.05.2016 ಕ್ಕಿಂತ 1 ವಾರ ಮುಂಚೆ ನಮ್ಮ ಪೆಪ್ಸಿ ಗೋಡೋನ್ ನಲ್ಲಿ ಆಗಿತ್ತು. ಆ ವೇಳೆಗೆ ನಾನು, ನನ್ನ ಗಂಡ ಮತ್ತು ಪ್ರತಿವಾದಿ ಇದ್ದೆವು. ಆ ವೇಳೆಗೆ ಸಾಕ್ಷಿದಾರರಾಗಿ ನವೀನ್ ಎನ್ನುವರು ಇದ್ದರು. ಸದರಿ ನವೀನ್ ರವರ ವಿಳಾಸ ನನಗೆ ಗೊತ್ತಿಲ್ಲ.

ದಾವಾ ಆಸ್ತಿಯು ಪ್ರತಿವಾದಿಗೆ ದಾನ ಪತ್ರದ ಮೂಲಕ ಬಂದಿದ್ದು, ಆ ದಾನ ಪತ್ರವನ್ನು ಯಾರು ಮತ್ತು ಯಾವಾಗ ಬರೆದುಕೊಟ್ಟಿದ್ದರು ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಯು ಭದ್ರಾವತಿಯ ನಗರದ ವ್ಯಾಪ್ತಿಯಲ್ಲಿ ಇರುವುದರಿಂದ ಅದರ

ಮಾರುಕಟ್ಟೆ ಮೌಲ್ಯ ರೂ.60,00,000/– ಇದೆ ಎಂದರೆ ಸರಿಯಲ್ಲ. ಸದರಿ ಕ್ರಯದ ಕರಾರು ಪತ್ರವನ್ನು ನೊಂದಣಿ ಮಾಡುವ ಪೂರ್ವದಲ್ಲಿ ದಾವಾ ಆಸ್ತಿಯ ನೊಂದಣಿ ಕಛೇರಿಯ ಮಾರುಕಟ್ಟೆ ಬೆಲೆ ಎಷ್ಟಿದೆ ಎಂದು ತಿಳಿಯಲು ದಾಖಲೆಯನ್ನು ನಾನು ಪಡೆದಿಲ್ಲ, ನನ್ನ ಗಂಡ ಅಥವಾ ಪ್ರತಿವಾದಿ ಪಡೆದಿರಬಹುದು.

ಕ್ರಯದ ಕರಾರು ಪತ್ರವನ್ನು ಸಿದ್ಧ ಪಡಿಸಲು ಪ್ರತಿವಾದಿಯು ಬರಹಗಾರರಿಗೆ ಮಾಹಿತಿ ನೀಡಿರುತ್ತಾರೆ. ಆ ಪತ್ರವನ್ನು ಚಂದ್ರಶೇಖರ್ ಎನ್ನುವರು ಸಿದ್ಧಪಡಿಸಿರುತ್ತಾರೆ. ಆ ಪತ್ರಕ್ಕೆ ಪಿ. ಕೃಷ್ಣಮೂರ್ತಿ ಬಿನ್ ಪಳನಿ ಸ್ವಾಮಿ ಮತ್ತು ಉಮೇಶ್ ಬಿನ್ ಪರಶುರಾಮ್ ರವರು ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರೆ. ಅವರ ವಿಳಾಸ ನನಗೆ ಗೊತ್ತಿಲ್ಲ. ಸದರಿ ಪತ್ರಕ್ಕೆ ಸಹಿ ಮಾಡಲು ನನಗೆ ಅಡಚಣೆ ಇರಲಿಲ್ಲ.

ನನ್ನ ಗಂಡ ತನ್ನ ಜೀವಿತ ಕಾಲದಲ್ಲಿ ಲೇವಾದೇವಿ ವ್ಯವಹಾರ ಮಾಡುತ್ತಿದ್ದು, ಅದನ್ನು ಒಪ್ಪಿದರೆ ಆ ಕುರಿತು ಪರವಾನಿಗೆಯನ್ನು ಹಾಜರು ಪಡಿಸಬೇಕಾಗುತ್ತದೆ ಎಂದು ತಿಳಿದು ಆ ವ್ಯವಹಾರ ಮಾಡುತ್ತಿರಲಿಲ್ಲವೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪ್ರತಿವಾದಿಗೆ ದೊಡ್ಡದಾದ ವೆಲ್ಡಿಂಗ್ ಮತ್ತು ವಾಹನಗಳ ತಯಾರಿಕೆ ಮಳಿಗೆ ಇದೆ ಎಂದರೆ ಸಾದಾರಣವಾದ ವೆಲ್ಡಿಂಗ್ ಮಳಿಗೆ ಇದೆ. ಅದರಿಂದ ಅವರಿಗೆ ಸಾಕಷ್ಟು ಆದಾಯ ಇದೆ ಎಂದರೆ ಇರಬಹುದು, ನನಗೆ ಗೊತ್ತಿಲ್ಲ.

ದಿನಾಂಕ 06.05.2016 ರ ಕ್ರಯದ ಕರಾರು ಪತ್ರಕ್ಕೆ 3 ವರ್ಷಗಳ ಅವಧಿಯನ್ನು ನಿಗಧಿಪಡಿಸಲಾಗಿತ್ತು. ನನ್ನ ಗಂಡ ಬದುಕಿದ್ದಾಗ ಸದರಿ ದಿನಾಂಕದಿಂದ 3 ವರ್ಷಗಳ

ಅವಧಿಯಲ್ಲಿ ಆ ಪತ್ರದ ಪ್ರಕಾರ ಕ್ರಯ ಪತ್ರವನ್ನು ಬರೆದುಕೊಡುವಂತೆ ಅವರು ಪ್ರತಿವಾದಿಗೆ ನೋಟೀಸ್ ನೀಡಿಲ್ಲ, ಮೌಖಿಕವಾಗಿ ಕೇಳಿರುತ್ತಾರೆ. ಆ ರೀತಿ ಮೌಖಿಕವಾಗಿ ಯಾವ ದಿನಾಂಕದಂದು ನನ್ನ ಗಂಡ ಕೇಳಿದ್ದರು ಎಂಬ ಬಗ್ಗೆ ವಾದ ಪತ್ರದಲ್ಲಿ ಹೇಳಿಲ್ಲ.

ಸದರಿ ಕ್ರಯದ ಕರಾರಿನ ಬಗ್ಗೆ ನನ್ನ ಗಂಡ ಮರಣ ಹೊಂದಿದ ನಂತರ ನನಗೆ ತಿಳಿದು ಬಂತು ಎಂದರೆ ಸರಿಯಲ್ಲ. ದಿನಾಂಕ 12.10.2020 ರಂದು ನನ್ನ ಗಂಡ ಮರಣ ಹೊಂದಿರುತ್ತಾರೆ. ನನ್ನ ಗಂಡ ಮರಣ ಹೊಂದಿದ ನಂತರ ಪ್ರತಿವಾದಿಯು ಸದರಿ ಕ್ರಯದ ಕರಾರಿನಂತೆ ನಡೆದುಕೊಳ್ಳಿ ಎಂದು ಅವರಿಗೆ ನಾನು ನೋಟೀಸ್ ನೀಡಿಲ್ಲ, ಮೌಖಿಕವಾಗಿ ಕೇಳಿದ್ದೆ. ಆ ವಿಷಯವನ್ನು ನನ್ನ ವಾದ ಪತ್ರದಲ್ಲಿ ಹೇಳಿಲ್ಲ, ಪ್ರತಿವಾದಿಯು ಕ್ರಯ ಪತ್ರವನ್ನು ಬರೆದುಕೊಡುವುದಾಗಿ ಹೇಳಿದ್ದರು.

ನನ್ನ ಗಂಡನಿಗೆ ನಾನು ಮತ್ತು 2, 3 ನೇ ವಾದಿಯರನ್ನು ಹೊರತು ಪಡಿಸಿ ಬೇರೆ ಯಾರು ವಾರಸುದಾರರು ಇರುವುದಿಲ್ಲ.

ನಿಪಿ.2 ಮತ್ತು 3 ರ ಕರಾರಿನ ಅವಧಿಯ ಮುಂದುವರಿಕೆ ಪತ್ರಗಳಾದಾಗ ನವೀನ್ ಮತ್ತು ರುದ್ರೇಶ್ ಎನ್ನುವವರು ಸಾಕ್ಷಿದಾರರಾಗಿದ್ದರು. ನಿಪಿ.2 ಮತ್ತು 3 ರ ದಿನಾಂಕ ಕ್ರಮವಾಗಿ 13.06.2019 ಮತ್ತು 17.02.2021 ಆಗಿವೆ. ಕ್ರಯ ಪತ್ರವನ್ನು ಸಿದ್ಧಪಡಿಸಲು ಅಗತ್ಯವಿರುವ ದಾಖಲೆಗಳನ್ನು ಸಿದ್ಧಪಡಿಸುವ ಸಲುವಾಗಿ ನಿಪಿ.2 ಮತ್ತು 3 ಅನ್ನು ಬರೆದುಕೊಟ್ಟಿದ್ದರು. ನಿಪಿ.2 ರಲ್ಲಿ ನನ್ನ ಗಂಡನ ಸಹಿ ಇಲ್ಲ ಎಂದರೆ ಸರಿ. ಸದರಿ ನವೀನ್ ಮತ್ತು ರುದ್ರೇಶ್ ರವರ ವಿಳಾಸ ನನಗೆ ಗೊತ್ತಿದೆ, ಅವರನ್ನು ಸಾಕ್ಷಿದಾರರಾಗಿ ಕರೆತರಲು ನನಗೆ ತೊಂದರೆ ಇಲ್ಲ.

ನಿಪಿ.1 ರ ಕ್ರಯದ ಕರಾರಿನ ಅವಧಿಯು ಮುಗಿದಿದ್ದ ಕಾರಣ, ನಿಪಿ.2 ಮತ್ತು 3 ಅನ್ನು ನಾನು ಮತ್ತು ಸಾಕ್ಷಿದಾರರು ಸೇರಿಕೊಂಡು ಪ್ರತಿವಾದಿ ಸಹಿಯನ್ನು ಸೃಷ್ಟಿಸಿ ಆ ದಾಖಲೆಗಳನ್ನು ಸಿದ್ಧಪಡಿಸಲಾಗಿದೆ ಎಂದರೆ ಸರಿಯಲ್ಲ.

ನನ್ನ ಗಂಡ ಬದುಕಿದ್ದಾಗ ಅವರಿಂದ ಪ್ರತಿವಾದಿಯು ಪಡೆದಿದ್ದ ಸಾಲದ ಮೊತ್ತಕ್ಕೆ ಅವರು ನನ್ನ ಗಂಡನಿಗೆ ನಿಪಿ.1 ಅನ್ನು ಭದ್ರತೆಗಾಗಿ ಪೂರಕ ದಾಖಲೆ ಎಂದು ಮಾಡಿಕೊಟ್ಟಿದ್ದರು ಎಂದರೆ ಸರಿಯಲ್ಲ. ಸದರಿ ಸಾಲದ ಹಣವನ್ನು ನನ್ನ ಗಂಡನಿಗೆ ಪ್ರತಿವಾದಿಯು ವಾಪಸ್ಸು ಮಾಡಿದ ನಂತರ ಆ ಪತ್ರವನ್ನು ರದ್ದು ಪಡಿಸುವುದಾಗಿ ನನ್ನ ಗಂಡ ಪ್ರತಿವಾದಿಗೆ ಹೇಳಿದ್ದ ಕಾರಣ ಪ್ರತಿವಾದಿಯು ಆ ಪತ್ರವನ್ನು ಭದ್ರತೆಗಾಗಿ ಮಾಡಿಕೊಟ್ಟಿದ್ದರು ಎಂದರೆ ಸರಿಯಲ್ಲ.

ಪ್ರತಿವಾದಿಯು ಸಾಲ ಮತ್ತು ಬಡ್ಡಿ ಹಣವನ್ನು ನನ್ನ ಗಂಡನಿಗೆ ವಾಪಸ್ಸು ಮಾಡಿದ್ದು, ಆ ಕುರಿತು ನನ್ನ ಗಂಡ ಸ್ವೀಕೃತಿಯನ್ನು ಪ್ರತಿವಾದಿಗೆ ನೀಡಿದ್ದರು ಎಂದರೆ ಸರಿಯಲ್ಲ. ಆ ರೀತಿ ವಾಪಸ್ಸು ಮಾಡಿದ ನಂತರ ಸದರಿ ಪತ್ರವನ್ನು ರದ್ದು ಪಡಿಸುವಂತೆ ಪ್ರತಿವಾದಿಯು ಹಲವಾರು ಬಾರಿ ನನ್ನ ಗಂಡನನ್ನು ಕೇಳಿದ್ದರು ಎಂದರೆ ಸರಿಯಲ್ಲ. ನನ್ನ ಗಂಡನಿಗೆ ಹಲವಾರು ಸಮಸ್ಯೆಗಳು ಇದ್ದುದ್ದರಿಂದ, ಬಿಡುವು ಮಾಡಿಕೊಂಡು ಸದರಿ ಪತ್ರವನ್ನು ರದ್ದು ಪಡಿಸುವುದಾಗಿ ಪ್ರತಿವಾದಿಗೆ ಭರವಸೆ ನೀಡಿದ್ದರು ಎಂದರೆ ಸರಿಯಲ್ಲ. ಆ ರೀತಿ ಭರವಸೆ ನೀಡಿದ್ದರಿಂದ ಪ್ರತಿವಾದಿಯು ತಾಳ್ಮೆಯಿಂದ ಕಾದಿದ್ದು, ಆದರೆ ನನ್ನ ಗಂಡ ಆ ಭರವಸೆಯನ್ನು ಈಡೇರಿಸದೆ ಮರಣ ಹೊಂದಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಸಾಲದ ಹಣ ಮತ್ತು ಬಡ್ಡಿ ಮರುಪಾವತಿ ಆಗಿರುವ ವಿಚಾರ ನನಗೆ ಗೊತ್ತಿದ್ದರೂ ಕೂಡ

ಅದನ್ನು ವಾದ ಪತ್ರದಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ. ಆ ರೀತಿ ಸಾಲದ ಹಣ ಮತ್ತು ಬಡ್ಡಿಯನ್ನು ಪ್ರತಿವಾದಿಯು ಪಾವತಿ ಮಾಡಿದ್ದ ಕಾರಣ ನನ್ನ ಗಂಡ ತನ್ನ ಜೀವಿತ ಅವಧಿಯಲ್ಲಿ ಪ್ರತಿವಾದಿಗೆ ಯಾವುದೇ ನೋಟೀಸ್ ನೀಡಿರಲಿಲ್ಲ ಮತ್ತು ಯಾವುದೇ ಪ್ರಕರಣ ದಾಖಲಿಸಿರಲಿಲ್ಲ ಎಂದರೆ ಸರಿಯಲ್ಲ.

ಸದರಿ ಸಾಲದ ಮತ್ತು ಬಡ್ಡಿಯ ಹಣ ಮರುಪಾವತಿ ಆಗಿರುವ ವಿಚಾರ ನನಗೆ ಗೊತ್ತಿದ್ದರೂ ಕೂಡ ನಿಪಿ.2 ಮತ್ತು 3 ಅನ್ನು ಸೃಷ್ಟಿಸಿಕೊಂಡು ದಾವಾ ಆಸ್ತಿಯನ್ನು ಕಬಳಿಸಲು ಸುಳ್ಳು ದಾವಾವನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

ನಿಪಿ.1 ಆದ ದಿನಾಂಕದಿಂದ 8 ವರ್ಷಗಳ ನಂತರ ಈ ದಾವಾವನ್ನು ದಾಖಲಿಸಲಾಗಿದೆ ಎಂದರೆ ಸರಿ. ಆ ಅವಧಿಯಲ್ಲಿ ನಾನಾಗಲೀ ಅಥವಾ ನನ್ನ ಗಂಡನಾಗಲೀ ಪ್ರತಿವಾದಿಗೆ ನೋಟೀಸು ನೀಡಿಲ್ಲ ಎಂದರೆ ಅವರೇ ಕ್ರಯ ಪತ್ರವನ್ನು ಬರೆದುಕೊಡುವುದಾಗಿ ಹೇಳಿದ್ದರಿಂದ ನೋಟೀಸು ನೀಡುವ ಪ್ರಮೇಯ ಬಂದಿರುವುದಿಲ್ಲ.

ನಿಪಿ.1 ರ ಪತ್ರವನ್ನು ದಾವಾ ಆಸ್ತಿಯನ್ನು ಮಾರಾಟ ಮಾಡುವ ಉದ್ದೇಶದಿಂದ ಬರೆದುಕೊಡದೇ ಕೇವಲ ಸಾಲದ ಭದ್ರತೆಗಾಗಿ ಬರೆದುಕೊಟ್ಟಿರುವುದರಿಂದ ಕ್ರಯ ಪತ್ರವನ್ನು ಬರೆದುಕೊಡುತ್ತೇನೆ ಎಂದು ಪ್ರತಿವಾದಿಯು ಎಂದೂ ಹೇಳಿಲ್ಲ ಎಂದರೆ ಸರಿಯಲ್ಲ.

ನನ್ನ ಗಂಡ ದೊಡ್ಡ ಮತ್ತು ಚಿಕ್ಕ ಸಹಿಗಳನ್ನು ಮಾಡುತ್ತಿದ್ದರು ಎಂದರೆ ಒಂದೇ ಸಹಿ ಮಾಡುತ್ತಿದ್ದರು. ಅವರ ಸಹಿಗಳಿರುವ ದಾಖಲೆಗಳನ್ನು ನೋಡಿದರೆ ಸಹಿಗಳನ್ನು ಗುರುತಿಸುತ್ತೇನೆ.

**ಮುಂದುವರೆದ ಪಾಟೀ ಸವಾಲನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.**

**(ಹನುಮಂತ ಜಿ.ಹೆಚ್.)**
**1 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಭದ್ರಾವತಿ**